**<u>ಹೆಚ್ಚುವರಿ ಹಿರಿಯ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಮುಧೋಳ</u>**

**<u>ಸಿ.ಸಿ ನಂ.369/2025</u>**

1) **ಕರ್ನಾಟಕ ಸರ್ಕಾರ, ಮುಧೋಳ ಪೊಲೀಸ ಠಾಣೆ**

**- ವಿರುದ್ಧ -** ... ಪಿರ್ಯಾದಿ.

1) **ಸಲೀಮ ಪಕ್ರುಸಾಬ ಯಡಹಳ್ಳಿ**

..... ಆರೋಪಿ

**ಉಪಸ್ಥಿತರು: ಶ್ರೀ.ವಿವೇಕ ಗ್ರಾಮೋಪಾಧ್ಯೆ**
B.S.L.LLB
**ಹೆಚ್ಚುವರಿ, ಹಿರಿಯ ಜೆ.ಎಂ.ಎಫ್.ಸಿ. ನ್ಯಾಯಾಧೀಶರು,**
**ಮುಧೋಳ.**

**<u>: : ದೋಷಾರೋಪಣೆ: :</u>**

ದಿನಾಂಕ 26.10.2024 ರಂದು ಮುಧೋಳ ವಲಯ ವ್ಯಾಪ್ತಿಯಲ್ಲಿ ಬರುವ ಬಳ್ಳೂರ ಆರ್.ಸಿ ಹತ್ತಿರ ಇರುವ ಎಲ್ ಆ್ಯಂಡ್ ಟಿ ಟ್ರ್ಯಾಕ್ಟರ ಶೋರೂಮ ಹತ್ತಿರ ನಿಮ್ಮ ಕ್ಯಾಂಟರ ವಾಹನ ಲಾರಿ ಸಂಖ್ಯೆ ಕೆ.ಎ.22/ಎಎ-6734 ನ್ನು ಮಾನವನ ಜೀವಕ್ಕೆ ಅಪಾಯಕಾರಿ ಆಗುವ ರೀತಿಯಲ್ಲಿ ಅತೀ ಜೋರಾಗಿ ಅಲಕ್ಷತನದಿಂದ ಯಾವುದೇ ಮುಂಜಾಗ್ರತೆ ಸೂಕ್ತ ಕ್ರಮ ಅನುಸರಿಸದೇ ನಿಯಂತ್ರಣ ಕಳೆದುಕೊಂಡು ಮೃತ ಅಭಿ ತನ್ನ ಮೋಟರ ಸೈಕಲ ಪ್ಲಾಟಿನಾ ಗಾಡಿಯ ಮೇಲೆ ತನ್ನ ತೋಟದ ಮನೆಗೆ ಮುಧೋಳ ಕಡೆಯಿಂದ ಲೋಕಾಪೂರ ಕಡೆಗೆ ಹೊರಟಾಗ ಆತನಿಗೆ ಅಪಘಾತಪಡಿಸಿ ಭಾರೀ ಗಾಯಪೆಟ್ಟು ಆಗುವಂತೆ ಮಾಡಿ ಆ ಮೂಲಕ ಕಲಂ.281 ಭಾರತೀಯ ನಾಗರಿಕ ಸಂಹಿತೆ-2023 ಅಡಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

ಮೇಲೆ ಹೇಳಿದ ಸ್ಥಳದಲ್ಲಿ ನೀವು ಯಾವುದೇ ಮುನ್ಸೂಚನೆ ಕ್ರಮ ವಹಿಸದೇ ಅಲಕ್ಷತನದಿಂದ ವಾಹನವನ್ನು ಸಾರ್ವಜನಿಕ ರಸ್ತೆಯ ಮೇಲೆ ಓಡಿಸಿ, ಮೃತ ಅಭಿ ಈತನಿಗೆ ಹಾಯಿಸಿ, ಸದರಿ ಗಾಯಳುವನ್ನು ಚಿಕಿತ್ಸೆ ಸಲುವಾಗಿ ಸಾಯಿ ಆಧಾರ ಆಸ್ಪತ್ರೆಗೆ ಕರೆದುಕೊಂಡು ಉಪಚಾರಕ್ಕೆ ಹೋಗಿ ಹೆಚ್ಚಿನ ಚಿಕಿತ್ಸೆಗೆ ಬಾಗಲಕೋಟೆಗೆ ಹೊರಟಾಗ ದಾರಿ ಮಧ್ಯ ಜೀರಗಾಳ ಗ್ರಾಮದ ಸಮೀಪಿ ಮರಣ ಹೊಂದುವಂತೆ ಮಾಡಿ ಆ ಮೂಲಕ ನೀವು ಕಲಂ.106(1) ಭಾರತೀಯ ನಾಗರಿಕ ಸಂಹಿತಾ-2023 ರ ಅಡಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

ಮೇಲೆ ಹೇಳಿದ ಸ್ಥಳದಲ್ಲಿ ನೀವು ಅಪಘಾತ ಆದ ಬಗ್ಗೆ ಯಾವುದೇ ವಿಷಯವನ್ನು ಠಾಣೆಗೆ ತಿಳಿಸದೇ ಹೋಗಿ ಆ ಮೂಲಕ ನೀವು ಕಲಂ.187 ಭಾರತೀಯ ಮೋಟರ ವಾಹನ ಕಾಯ್ದೆ -1988 ರ ಅಡಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

ಮೇಲ್ಕಾಣಿಸಿದ ದೋಷಾರೋಪಣೆಗಾಗಿ ನಿಮ್ಮ ಮೇಲೆ ವಿಚಾರಣೆಯಾಗಲು ಆದೇಶಿಸುತ್ತೇನೆ.

ಸ್ಥಳ : ಮುಧೋಳ ಓ ಹೇ ಕೇ ಸರಿ ಇದೆ.
ದಿನಾಂಕ : 24-01-2026 ಸಹಿ/-

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ ಮುಧೋಳ.

**<u>ಹೆಚ್ಚುವರಿ ಹಿರಿಯ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಮುಧೋಳ</u>**

**<u>ಸಿ.ಸಿ ನಂ.369/2025</u>**

1) ಕರ್ನಾಟಕ ಸರ್ಕಾರ ...ಫಿರ್ಯಾದಿ.
ಪ್ರತಿನಿಧಿಸುವವರು ಮುಧೋಳ ಪೊಲೀಸ ಠಾಣೆ

**- ವಿರುದ್ಧ -**

1) ಸಲೀಮ ಪಕ್ರುಸಾಬ ಯಡಹಳ್ಳಿ

....ಆರೋಪಿ

**<u>- ಃ ಆಪಾದನೆ ಃ -</u>**

ಪ್ರಶ್ನೆ ಃ- 1)- ಈಗ ಹೇಳಿ ವಿವರಿಸಿದ ದೋಷಾರೋಪಣೆ ನಿಮಗೆ ತಿಳಿಯಿತೇ?

ಉತ್ತರಃ- ಆ.- ತಿಳಿಯಿತು.

ಪ್ರಶ್ನೆ ಃ- 2) - ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ?

ಉತ್ತರಃ- ಆ.- ಇಲ್ಲ, ವಿಚಾರಣೆಯಾಗಬೇಕು.

ಸ್ಥಳ ಃ ಮುಧೋಳ
ದಿನಾಂಕಃ 24-01-2026

ಓ ಹೇ ಕೇ ಸರಿ ಇದೆ.
ಸಹಿ/-

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ, ಮುಧೋಳ.